೩) ಅಕಾಡೆಮಿ ಪ್ರಶಸ್ತಿಯನ್ನು ಗುಲ್ಬರ್ಗಾದಲ್ಲಿ ಏರ್ಪಡಿಸಿದ ೫ ಜನರಿಗೆ ಪ್ರಶಸ್ತಿ ನೀಡಲಾಯಿತು.

೪) ೧೨ ಜನರಿಗೆ ವೈದ್ಯಕೀಯ ನೆರವು ನೀಡಲಾಗಿದೆ.

೫) ಅಕಾಡೆಮಿ ಕಲಾವಿದರ ಮಾಲೆಯಲ್ಲಿ ೫ ಪುಸ್ತಕ ಕಲೆಗೆ ಸಂಬಂಧಿಸಿದಂತೆ, ೨ ಪುಸ್ತಕ ಪ್ರಕಟಣೆ ಮತ್ತು ಕಲಾವಾರ್ತೆ ಪ್ರಕಟಣೆಯನ್ನು ಪ್ರಕಟಿಸಲಾಯಿತು.

೬) ಅಕಾಡೆಮಿ ಗ್ರಂಥ ಭಂಡಾರಕ್ಕೆ ಕಲಾಪುಸ್ತಕ ಖರೀದಿಯನ್ನು ಮಾಡಲಾಗಿದೆ.

೭) ಅಕಾಡೆಮಿಯ ಸಂಚಾರಿ ವಾಹನ ರಾಜ್ಯದ ವಿವಿಧ ಸ್ಥಳಗಳಲ್ಲಿ ಪ್ರದರ್ಶನ ನೀಡಿದೆ.

೮) ಕಲಾವಿದರಿಗಾಗಿ ಗ್ರಾಫಿಕ್ ಕಾರ್ಯಗಾರವನ್ನು ಏರ್ಪಡಿಸಲಾಗಿದೆ.

೯) ರಾಜ್ಯದಲ್ಲಿರುವ ಭಿತ್ತಿ ಪತ್ರಗಳ ನಕಲು ಮಾಡಲಾಗಿದೆ.

೧೦) ಕಲಾವಿದ ಹೆಬ್ಬಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದಾಗ ಸನ್ಮಾನಿಸಲಾಗಿದೆ.

ಪೀಣ್ಯಾದಲ್ಲಿ ಸರ್ಕಾರದ ಜಮೀನನ್ನು ಅನಧಿಕೃತವಾಗಿ ಅತಿಕ್ರಮಿಸಿರುವ ಬಗ್ಗೆ.

೧೨೦೭ ಶ್ರೀ ರಾಮಲಿಂಗರೆಡ್ಡಿ (ಜಯನಗರ) ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .—

ಅ) ಬೆಂಗಳೂರಿನ ಪೀಣ್ಯಾದ ೩ನೇ ಸ್ಟೇಜ್ (ಲಕ್ಷ್ಮಿದೇವಿನಗರ) ದಲ್ಲಿರುವ ಕೊಳಚೆ ನಿರ್ಮೂಲನಾ ಮಂಡಳಿಯ ಸಂಜಯಗಾಂಧಿ ಗಂಡಿಸಲು ಸರ್ಕಾರಿ ಜಾಗದಲ್ಲಿ ಖಾಸಗಿಯ ಕಾರ್ಖಾನೆಯೊಂದು ಅಕ್ರಮವಾಗಿ ಕಟ್ಟಿಡ ನಿರ್ಮಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಇದನ್ನು ತೆರವು ಮಾಡಲು ಸರ್ಕಾರದವರಿಗೆ ಇರುವ ಅಡಚಣೆಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಅನಧಿಕೃತವಾಗಿ ಅತಿಕ್ರಮಿಸಿರುವ ಮೂಲೀಕರಿಬ್ಬರಲ್ಲಿ ಒಬ್ಬರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಂ. ೪೦೨೫೮ : ೮೨ ಹಾಕಿ ಸಡೆ ಯಾಜ್ಞೆಯನ್ನು ತೆರವು ಮಾಡುವ ವಿರುದ್ಧ ದಿನಾಂಕ ೨೩-೮೫ರಂದು ಪಡೆದಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಸದರಿ ವಿಷಯದಲ್ಲಿ ವಿಚಾರಣೆಯನ್ನು ಶೀಘ್ರದಲ್ಲಿ ಮಾಡಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಸೂಚಿಸಲಾಗಿದೆ.

ಮುಲ್ಕಿ ಕೊಳಚೆ ಪ್ರದೇಶದ ಬಗ್ಗೆ

೧೨೨೮. ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮಂಗಳೂರಿನ ನವಬಂದರಿನ ಕೊಳಚೆ ಪ್ರದೇಶದಲ್ಲಿ ಸುಮಾರು ೪೦೦ ಕೂಲಿಕಾರ ಕುಟುಂಬದವರು ಮುಲ್ಕಿಯಲ್ಲಿ ನೆಲೆಸಲು ಯಾವಾಗ ಬಲಸೆ ಹೋದರು,

ಆ) ಈ ಜನರಿಗೆ ಸಕಲ ನಾಗರಿಕಾ ಸೌಕರ್ಯವನ್ನು ಕೊಡುವ ಭರವಸೆಯನ್ನಿತ್ತ ಸರ್ಕಾರ ಒಟ್ಟು ಎಷ್ಟು ಕುಟುಂಬಗಳಿಗೆ ಎಷ್ಟೆಷ್ಟು ಸ್ಥಳವನ್ನು ಕೊಟ್ಟಿದೆ,

ಇ) ನಾಗರೀಕ ಸೌಕರ್ಯ ಒದಗಿಸಲಾಗಿದೆಯೇ ಹಾಗೂ ಇದಕ್ಕೆ ಎಷ್ಟು ಖರ್ಚುಮಾಡಲಾಗಿದೆ,

ಈ) ಇಲ್ಲಿಯ ಕೊಳಚೆ ಪ್ರದೇಶದ ಅಭಿವೃದ್ಧಿಗೆ ಸರ್ಕಾರವು ಏನು ಕಾರ್ಯಕ್ರಮ ಹಾಕಿಕೊಂಡಿದೆ ?